# ಕರ್ನಾಟಕ ಕಂಡ ದಾರ್ಶನಿಕ ನೇತಾರ

**- ಎಚ್.ಎಲ್.ಶಿವಾನಂದ**

**ಅಧ್ಯಕ್ಷರು, ಆರ್.ಎಲ್.ಜಾಲಪ್ಪ ಅಕಾಡೆಮಿ**

2006ರ ಜನವರಿಯ ಚಳಿಗಾಲದ ಒಂದು ಸಂಜೆ 5 ಗಂಟೆಯ ಸುಮಾರಿಗೆ ನನ್ನ ಕಾರ್ಯದರ್ಶಿ ಇಂಟರ್ಕಾಂ ನಿಂದ `ಎಂ.ಪಿ ಸಾಹೇಬರು, ಮಾಜಿ ಸಚಿವರು ಆರ್.ಎಲ್ ಜಾಲಪ್ಪನವರು ಲೈನ್ನಲ್ಲಿ ಇದ್ದಾರೆ, ನಿಮ್ಮೊಂದಿಗೆ ಮಾತನಾಡಬೇಕಂತೆ, ಕನೆಕ್ಟ್ ಮಾಡ್ಲಾ ಸರ್' ಎಂದು ಕೇಳಿದರು. ನಾನು ಕರ್ನಾಟಕ ಉದ್ಯೋಗ ಮಿತ್ರದ (ಕರ್ನಾಟಕ ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸಂಸ್ಥೆ) ವ್ಯವಸ್ಥಾಪಕ ನಿರ್ದೇಶಕನಾಗಿದ್ದ ಕಾಲ. `ಆಗಲಿ, ತಕ್ಷಣ ಲೈನ್ ಕನೆಕ್ಟ್ ಮಾಡಿ' ಎಂದು ಹೇಳಿದೆ. ಇದಕ್ಕೂ ಮೊದಲು 1998 ರಿಂದ 2005 ರ ವರೆಗೆ ಸುಮಾರು ಏಳು ವರ್ಷಗಳ ಕಾಲ ನಾನು ನವದೆಹಲಿಯಲ್ಲಿರುವ ಕರ್ನಾಟಕ ಭವನದಲ್ಲಿ ಕರ್ನಾಟಕ ಉದ್ಯೋಗ ಮಿತ್ರದ ದೆಹಲಿ ಶಾಖೆಯ ಸ್ಥಾನಿಕ ನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದಾಗ ಕಛೇರಿ ಕೆಲಸದ ನಿಮಿತ್ತ ಅವರನ್ನು 2-3 ಬಾರಿ ಭೇಟಿ ಮಾಡಿದ್ದೆ.

ಲೈನ್ ಗೆ ಬಂದ ತಕ್ಷಣ `ಹೇಗಿದ್ದೀರಿ ಶಿವಾನಂದ್? ದೆಹಲಿಯಿಂದ ಬಂದು ಎಷ್ಟು ದಿನ ಆಯ್ತು?' ಇತ್ಯಾದಿ ಉಭಯ ಕುಶಲೋಪರಿ ನಂತರ ನೇರವಾಗಿ ವಿಷಯಕ್ಕೆ ಬಂದರು. `ಜೆ.ಪಿ ನಾರಾಯಣಸ್ವಾಮಿ ಎನ್ನುವ ನನ್ನ ಸ್ನೇಹಿತರು ಒಬ್ಬ ಉದ್ಯಮಿ, ನಿಮ್ಮ ಹತ್ತಿರ ಕಳುಹಿಸುತ್ತೇನೆ, ಅವರು ಅವರ ಒಂದು ಪ್ರಾಜೆಕ್ಟ್ ಬಗ್ಗೆ ನಿಮ್ಮ ಸಲಹೆ ಕೇಳಲು ನಿಮ್ಮ ಸಮಯ ಕೇಳಿಕೊಂಡು ಬರುತ್ತಾರೆ. ದಯವಿಟ್ಟು ಅವರಿಗೆ ಸಹಾಯ ಮಾಡಿ' ಎಂದರು. `ಖಂಡಿತಾ ಅವರು ಬರಲಿ, ನನಗೆ ಗೊತ್ತಿರುವ ಎಲ್ಲಾ ತರಹದ ಸಲಹೆ ಮತ್ತು ಸಹಕಾರ ನೀಡುತ್ತೇನೆ ಸಾರ್' ಎಂದು ತಿಳಿಸಿದೆ.

- ಇದು ಕರ್ನಾಟಕದಲ್ಲಿ ನನ್ನ ಹಾಗೂ ಆರ್.ಎಲ್. ಜಾಲಪ್ಪನವರ ಪ್ರಥಮ ಟೆಲಿಫೋನ್ ಸಂಭಾಷಣೆ.

ಹತ್ತು ದಿನಗಳ ನಂತರ ಜೆ.ಪಿ ನಾರಾಯಣಸ್ವಾಮಿಯವರು ತಮ್ಮ ಸಹಾಯಕ ಪೂರ್ಣೇಶ್ ಅವರೊಂದಿಗೆ ಬೆಂಗಳೂರಿನ ಖನಿಜ ಭವನದಲ್ಲಿರುವ ನಮ್ಮ ಕಛೇರಿಗೆ ಬಂದರು. ಬರುವ ಮೊದಲೇ ಅವರು ಪೂರ್ಣೇಶ್ ಮೂಲಕ ನಾನು ಮೈಸೂರು ಈಡಿಗ ಹಾಸ್ಟೆಲ್ ನ ಹಳೆಯ ವಿದ್ಯಾರ್ಥಿ ಎಂದು ತಿಳಿದುಕೊಂಡಿದ್ದರು. ನನಗೆ ಕೂಡ ಜೆ.ಪಿ ಅವರ ಬಗ್ಗೆ ಮಾಹಿತಿ ಇತ್ತು. ಇದು ನಮ್ಮಿಬ್ಬರ ಪ್ರಥಮ ಭೇಟಿ. ಅದು ಒಬ್ಬ ಉದ್ಯಮಿ ಮತ್ತು ಸರ್ಕಾರಿ ಅಧಿಕಾರಿಯ ನಡುವಿನ ಮಾಮೂಲಿ ಭೇಟಿಯಾಗಿರದೆ ಪ್ರೀತಿ, ಅಭಿಮಾನದಿಂದ ಕೂಡಿದ ಸೌಹಾರ್ದಯುತ ಭೇಟಿಯಾಗಿತ್ತು, ಸುಮಾರು ಒಂದು ಗಂಟೆಯ ಕಾಲ ನಮ್ಮ ಕಛೇರಿಯಲ್ಲಿ ಅವರೊಂದಿಗೆ ಚರ್ಚಿಸಿ ಅವರ ಪ್ರಾಜೆಕ್ಟ್ ಗೆ ಸಂಬಂಧಿಸಿದ ಸಲಹೆ ಮತ್ತು ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ತಿಳಿಸಿದೆ. ಅವರು ಸಂತೋಷದಿಂದ ಮರಳಿದರು.

ಆಗಸ್ಟ್ 2011ರಲ್ಲಿ ನಾನು ರಾಜ್ಯಮಟ್ಟದ `ಕರ್ನಾಟಕ ರಾಜ್ಯ ಈಡಿಗ ನೌಕರರ ಕ್ಷೇಮಾಭಿವೃದ್ಧಿ ಸಂಘ"ದ ಅಧ್ಯಕ್ಷನಾಗಿ ಆಯ್ಕೆಯಾಗಿದ್ದೆ. ಅಂದಿನಿಂದ ನೌಕರರ ಸಂಘದ ಅಧ್ಯಕ್ಷನಾಗಿ `ಕರ್ನಾಟಕ ಪ್ರದೇಶ ಈಡಿಗ ಸಂಘ"ದ ಎಲ್ಲಾ ಸಭೆಗಳಲ್ಲೂ ಭಾಗವಹಿಸುತ್ತಿದ್ದೆ.

2014 ರ ಸೆಪ್ಟೆಂಬರ್ ಮೊದಲ ವಾರದ ಒಂದು ದಿನ ಸಂಜೆ ಜೆ.ಪಿಯವರು ನನಗೆ ಫೋನ್ ಮಾಡಿ `ನಿಮ್ಮ ನೌಕರ ಸಂಘದವರು ನೀಡುತ್ತಿರುವ ಎಜುಬ್ರಿಡ್ಜ್ ತರಬೇತಿ ಮತ್ತು ಐ.ಎ.ಎಸ್ ಕೋಚಿಂಗ್ ವಿಷಯ ಸನ್ಮಾನ್ಯ ಜಾಲಪ್ಪನವರ ಗಮನಕ್ಕೆ ಬಂದಿದೆ, ಈ ವಿಷಯದ ಬಗ್ಗೆ ನೀವು ಸಂಘದ ಪದಾಧಿಕಾರಿಗಳ ಸಮೇತ ಇನ್ನೂ 3-4 ದಿನಗಳ ಒಳಗೆ ಒಂದು ಸಂಜೆ ಜಾಲಪ್ಪನವರನ್ನು ಅವರ

ಮನೆಯಲ್ಲಿ ಭೇಟಿ ಮಾಡಿ ಅವರೊಂದಿಗೆ ಚರ್ಚಿಸಲು ತಿಳಿಸಿದ್ದಾರೆ. ಇದರಿಂದ ನಿಮ್ಮ ಸಂಘದ ಪ್ರಯತ್ನಗಳಿಗೆ ಸಹಾಯವಾಗಬಹುದು' ಎಂದು ಸೂಚ್ಯವಾಗಿ ತಿಳಿಸಿದರು.

ಎಜು-ಬ್ರಿಡ್ಜ್ ತರಬೇತಿ: ನೌಕರರ ಸಂಘದ ಕಾರ್ಯಕ್ರಮವಾಗಿ 2009 ರಲ್ಲಿ ನವದೆಹಲಿಯಲ್ಲಿರುವ ಎಜು-ಬ್ರಿಡ್ಜ್ ಎನ್ನುವ ಸಂಸ್ಥೆಯ ಸಹಕಾರದಿಂದ ಈಡಿಗ ಸಮುದಾಯದ ಆಸಕ್ತ ನಿರುದ್ಯೋಗಿ ಯುವಕ ಯುವತಿಯರಿಗೆ ಎರಡು ತಿಂಗಳ ಕೌಶಲ್ಯ ತರಬೇತಿಯನ್ನು ನೀಡಿ ಅವರುಗಳಿಗೆ ಹೆಸರಾಂತ ಕಂಪನಿಗಳಲ್ಲಿ ಉದ್ಯೋಗವನ್ನು ಕೊಡಿಸುತ್ತಿದ್ದೆವು. ಈ ಕೌಶಲ್ಯ ತರಬೇತಿಯಲ್ಲಿ ಕಂಪ್ಯೂಟರ್, ವ್ಯವಹಾರಿಕ ಇಂಗ್ಲೀಷ್, ಬ್ಯಾಂಕಿಂಗ್ ವ್ಯವಹಾರ, ಕಂಪನಿಗಳಲ್ಲಿ ಕೆಲಸ ಮಾಡಲು ಅಲ್ಲಿನ ಶಿಷ್ಟಾಚಾರ, ನಡವಳಿಕೆ ಹಾಗೂ ಕಂಪನಿಗಳ ಕೆಲಸದ ಸಂದರ್ಶನಕ್ಕೆ ತಯಾರಿ ಇತ್ಯಾದಿ ವಿಷಯಗಳನ್ನು ಕಲಿಸುತ್ತಿದ್ದೆವು. 2009-10, 2010-11 ಈ ಎರಡು ವರ್ಷಗಳ ಅವಧಿಯಲ್ಲಿ ಕುಮುಟ, ಶಿವಮೊಗ್ಗ ಮತ್ತು ತುಮಕೂರು ಈ ಮೂರು ನಗರಗಳಲ್ಲಿ ಕೌಶಲ್ಯ ತರಬೇತಿ ನೀಡಿ ಸಮುದಾಯದ ಸುಮಾರು 2000 ಕ್ಕೂ ಹೆಚ್ಚಿನ ಸಂಖ್ಯೆಯ ಯುವಕ ಯುವತಿಯರಿಗೆ ಉದ್ಯೋಗಗಳನ್ನು ಕೊಡಿಸಿದ ಕೀರ್ತಿ ನಮ್ಮ ನೌಕರ ಸಂಘದ್ದಾಗಿತ್ತು.

ಐ.ಎ.ಎಸ್ ಕೋಚಿಂಗ್: 20 ಕ್ಕೂ ಹೆಚ್ಚು ಈಡಿಗ ಸಮುದಾಯದ ಆಸಕ್ತ ಪದವೀಧರ ಯುವಕ ಯುವತಿಯರಿಗೆ ಆರು ತಿಂಗಳ ಕಾಲ ಎರಡು ಬ್ಯಾಚ್ನಲ್ಲಿ ಕ್ರಮವಾಗಿ 2012-13 ಮತ್ತು 2013-14 ರ ಅವಧಿಯಲ್ಲಿ ಐ.ಎ.ಎಸ್ ಪರೀಕ್ಷೆಗಾಗಿ ಕೋಚಿಂಗ್ ನೀಡಲಾಗಿತ್ತು.

ಜಾಲಪ್ಪನವರು ಒಬ್ಬ ದಕ್ಷ, ನೇರ ನುಡಿಯ ಧೀಮಂತ ರಾಜಕಾರಣಿ, ಹಿಂದುಳಿದ ವರ್ಗಗಳ ನೇತಾರ, ಸಹಕಾರಿ ರಂಗದಲ್ಲಿ ಅತ್ಯಂತ ಅನುಭವಿ ಮತ್ತು ವಿವಿಧ ವಿದ್ಯಾಸಂಸ್ಥೆಗಳ ಸಂಸ್ಥಾಪಕ ಎಂದೆಲ್ಲಾ ನಮ್ಮೆಲ್ಲರಿಗೂ ಗೊತ್ತಿದ್ದರಿಂದ ಹಾಗೂ ಅವರ ಈ ಪ್ರಖರ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಅವರನ್ನು ಭೇಟಿ ಮಾಡುವ ಬಗ್ಗೆ ನಮ್ಮಗಳ ಮನಸ್ಸಿನಲ್ಲಿ ಒಂದು ಬಗೆಯ ತಳಮಳ ಪ್ರಾರಂಭವಾಗಿತ್ತು.

ಜೆ.ಪಿಯವರು ಸೂಚಿಸಿದ ಅವಧಿಯೊಳಗೇ ಒಂದು ಸಂಜೆ 7 ಗಂಟೆಗೆ ಎಲ್ಲರೂ ಅವರವರ ಕೆಲಸ ಕಾರ್ಯಗಳನ್ನು ಮುಗಿಸಿಕೊಂಡು ನಾನು ಹಾಗೂ ನಮ್ಮ ನೌಕರರ ಸಂಘದ ಪದಾಧಿಕಾರಿಗಳಾದ ಲಕ್ಷ್ಮೀನರಸಯ್ಯ, ಲಕ್ಷ್ಮಣ ಕೊಡಸೆ, ಟಿ. ನರಸಿಂಹಸ್ವಾಮಿ, ಮಂಜಪ್ಪ ಮುಂತಾದ ಎಂಟು ಜನರು ಡಾಲರ್ಸ್ ಕಾಲೋನಿಯಲ್ಲಿರುವ ಜಾಲಪ್ಪ ಸಾಹೇಬರ ಮನೆಯಲ್ಲಿ ಅವರನ್ನು ಭೇಟಿಯಾದೆವು. ಎಲ್ಲರೂ ನಮ್ಮ ಪರಿಚಯ ಹೇಳಿಕೊಂಡೆವು. ನಂತರ ಅವರು ನಮ್ಮ ಎರಡೂ ತರಬೇತಿಯ ಬಗ್ಗೆ ವಿವರಣೆಯನ್ನು ಪಡೆದರು. ಎಲ್ಲವನ್ನು ಕೇಳಿದ ನಂತರ `ನೀವು ಏಕೆ ಈ ಕೆಲಸ ಮಾಡುತ್ತಿದ್ದೀರಿ? ಏನು ಉದ್ದೇಶ?' ಎಂದು ಬಹು ಸರಳವಾಗಿ ಕೇಳಿದರು. ಅದಕ್ಕೆ ನಾವು `ನಾವೆಲ್ಲರೂ ಬೆಂಗಳೂರು, ಮೈಸೂರು ಈಡಿಗರ ಹಾಸ್ಟೆಲ್ ಗಳಲ್ಲಿ ಇದ್ದುಕೊಂಡು ಓದಿದವರು, ಸಮುದಾಯದ ಋಣ ನಮ್ಮ ಮೇಲಿದೆ. ಆದ್ದರಿಂದ ಸಂಘಟಿತರಾಗಿ ಸಾಧ್ಯವಾದಷ್ಟು ಸಮುದಾಯದ ಅರ್ಹ ಯುವಕ ಯುವತಿಯರಿಗೆ ಉದ್ಯೋಗ ಕೊಡಿಸುವಲ್ಲಿ ನೆರವು ನೀಡುತ್ತಿದ್ದೇವೆ' ಎಂದು ತಿಳಿಸಿದೆವು. ನಮ್ಮ ಉತ್ತರದಿಂದ ಸಂತೃಪ್ತರಾದ ಅವರು `ನನ್ನಿಂದ ಏನು ಬಯಸುತ್ತೀರಿ?' ಎಂದು ಕೇಳಿದರು, `ಅದು ತಮ್ಮ ಇಚ್ಛೆಗೆ ಬಿಟ್ಟಿದ್ದು' ಎಂದು ನಾವು ತಿಳಿಸಿದ ಮೇಲೆ `ಆಯ್ತು, ನಾನು ನಿಮ್ಮೊಂದಿಗೆ ಕೈಜೋಡಿಸುತ್ತೇನೆ, ಆರ್ಥಿಕ ನೆರವು ನೀಡುತ್ತೇನೆ' ಎಂದು ತಿಳಿಸಿದರು. ನಾವೆಲ್ಲರೂ ಸಂತೋಷಭರಿತರಾಗಿ ಹಿಂತಿರುಗಿದೆವು.

ನಂತರದ ಒಂದು ವಾರದೊಳಗೆ `ಕರ್ನಾಟಕ ಪ್ರದೇಶ ಆರ್ಯ ಈಡಿಗ ಸಂಘ'ದ ಅಧ್ಯಕ್ಷ ಜೆ.ಪಿ.ನಾರಾಯಣಸ್ವಾಮಿ ಮತ್ತು ಇತರ ಪದಾಧಿಕಾರಿಗಳನ್ನು ಹಾಗೂ ನಮ್ಮ ನೌಕರ ಸಂಘದ ಪದಾಧಿಕಾರಿಗಳನ್ನು ಕರೆಸಿ 3-4 ಸಭೆಗಳನ್ನು ಮಾಡಿ, ವಿವಿಧ ವಿಷಯಗಳನ್ನು ಚರ್ಚಿಸಿ ಅಕಾಡೆಮಿಯೊಂದನ್ನು ಸೋಲೂರಿನ `ಆರ್ಯ ಈಡಿಗ ಮಹಾಸಂಸ್ಥಾನ'ದ ಕಟ್ಟಡಗಳಲ್ಲಿ ಪ್ರಾರಂಭಿಸಲು ತೀರ್ಮಾನಿಸಲಾಯಿತು.

ದಿನಾಂಕ: 20-05-2015ರಂದು `ಆರ್.ಎಲ್ ಜಾಲಪ್ಪ ಅಕಾಡೆಮಿ' ಚಾರಿಟೆಬಲ್ ಟ್ರಸ್ಟ್ ಅನ್ನು ನೋಂದಣಿ ಮಾಡಲಾಯಿತು. ಎಚ್.ಎಲ್.ಶಿವಾನಂದ್ ಅಧ್ಯಕ್ಷರಾಗಿ, ಲಕ್ಷ್ಮೀನರಸಯ್ಯ ಕಾರ್ಯದರ್ಶಿಯಾಗಿ ಮತ್ತು ಕೆ.ಜಿ. ಹನುಮಂತರಾಜು ಖಜಾಂಜಿಯಾಗಿ ನೇಮಕಗೊಂಡರು. ಲಕ್ಷ್ಮೀನರಸಯ್ಯನವರು ಕೆ.ಪಿ.ಎಸ್.ಸಿ ಸದಸ್ಯರಾಗಿ ನೇಮಕಗೊಂಡ ನಂತರ ಅವರು ಕಾರ್ಯದರ್ಶಿ ಹುದ್ದೆಗೆ ರಾಜಿನಾಮೆ ನೀಡಿದ್ದರಿಂದ ಟ್ರಸ್ಟಿಗಳಲ್ಲಿ ಒಬ್ಬರಾಗಿದ್ದ ಲಕ್ಷ್ಮಣ ಕೊಡಸೆಯವರನ್ನು ಕಾರ್ಯದರ್ಶಿಯಾಗಿ ನೇಮಿಸಲಾಯಿತು.

ಜಾಲಪ್ಪನವರು ಕೋಲಾರದ ದೇವರಾಜ ಅರಸು ವೈದ್ಯಕೀಯ ಕಾಲೇಜಿನ ಅಧ್ಯಕ್ಷರಾಗಿ, ಆ ಸಂಸ್ಥೆಯ ಟ್ರಸ್ಟ್ ವತಿಯಿಂದ `ಆರ್.ಎಲ್.ಜಾಲಪ್ಪ ಅಕಾಡೆಮಿ'ಗೆ ಬೇಕಾದ ಮೂಲ ಸೌಲಭ್ಯಗಳಿಗಾಗಿ ಆರ್ಥಿಕ ನೆರವು ನೀಡಿದರು. ಅಂದಿನ ಆರ್ಯ ಈಡಿಗ ಮಹಾ ಸಂಸ್ಥಾನದ ಅಧ್ಯಕ್ಷರಾದ ಜೆ.ಪಿ. ಯವರ ಮುಂದಾಳತ್ವದಲ್ಲಿ ಆರ್ಯ ಈಡಿಗ ಮಹಾ ಸಂಸ್ಥಾನವು ಉಚಿತವಾಗಿ ಅಕಾಡೆಮಿಗೆ ಕ್ಲಾಸ್ ರೂಂ, ಲೈಬ್ರರಿ, ಕಂಪ್ಯೂಟರ್ ರೂಂ, ಯುವಕರ ಹಾಸ್ಟೆಲ್, ಯುವತಿಯರ ಹಾಸ್ಟೆಲ್, ಊಟದ ಮನೆ ಇತ್ಯಾದಿಗಳಿಗಾಗಿ ಕಟ್ಟಡಗಳನ್ನು ಒದಗಿಸಿದರು. ಈಡಿಗ ನೌಕರರ ಸಂಘದ ವತಿಯಿಂದ ತರಬೇತಿ ನಡೆಸಲು ಬೇಕಾದ ಎಲ್ಲಾ ಬೌದ್ಧಿಕ ನೆರವನ್ನು ನೀಡಲಾಯಿತು.

ಜಾಲಪ್ಪನವರ ಸೂಚನೆಯಂತೆ ಈಡಿಗ ಸಮುದಾಯ ಮತ್ತು ಇತರೆ ಎಲ್ಲಾ ಹಿಂದುಳಿದ ವರ್ಗಗಳ ಯುವಕ ಯುವತಿಯರಿಗೆ ಆರ್.ಎಲ್.ಜಾಲಪ್ಪ ಅಕಾಡೆಮಿಯಲ್ಲಿ ಪ್ರವೇಶ ನೀಡಲು ನಿರ್ಧರಿಸಲಾಯಿತು.

2015ರ ಜೂನ್ 16 ರಂದು ಅಂದಿನ ಮುಖ್ಯಮಂತ್ರಿ ಸನ್ಮಾನ್ಯ ಸಿದ್ದರಾಮಯ್ಯನವರು ಸೋಲೂರಿಗೆ ಆಗಮಿಸಿ ಆರ್.ಎಲ್ ಜಾಲಪ್ಪ ಅಕಾಡೆಮಿಯನ್ನು ಉದ್ಘಾಟನೆ ಮಾಡಿದರು.

ಸೋಲೂರಿನಲ್ಲಿ ಆರ್.ಎಲ್. ಜಾಲಪ್ಪ ಅಕಾಡೆಮಿ ಪ್ರಾರಂಭವಾದ ನಂತರ 2-3 ತಿಂಗಳಿಗೊಮ್ಮೆ ಅಕಾಡೆಮಿಯ ಟ್ರಸ್ಟ್ ನ ಸಭೆಯನ್ನು ಆರ್.ಎಲ್.ಜಾಲಪ್ಪನವರ ಡಾಲರ್ಸ್ ಕಾಲೋನಿಯಲ್ಲಿರುವ ಮನೆಯಲ್ಲಿ ನಡೆಸುತ್ತಿದ್ದೆವು. ಅವರು ಈ ಟ್ರಸ್ಟ್ ನ ಮಹಾಪೋಷಕರಾಗಿ ಮಾರ್ಗದರ್ಶನ ನೀಡುತ್ತಿದ್ದರು. ಜೆ.ಪಿ.ನಾರಾಯಣಸ್ವಾಮಿ, ಎಂ.ತಿಮ್ಮೇಗೌಡ, ಜಿ.ಎಚ್. ನಾಗರಾಜು, ಎನ್.ಉದಯ್, ಟಿ.ನರಸಿಂಹಸ್ವಾಮಿ ಸೇರಿದಂತೆ ಟ್ರಸ್ಟಿನ ಸದಸ್ಯರು ಭಾಗವಹಿಸುತ್ತಿದ್ದೆವು. ಪ್ರತೀ ಸಭೆಗೂ ಒಳ್ಳೆಯ ಆತಿಥ್ಯವನ್ನು ಅವರ ಮನೆಯಿಂದಲೇ ಒದಗಿಸುತ್ತಿದ್ದರು. ನಾವು ಎಷ್ಟು ಕೆಲಸ ಮಾಡಿದರೂ ಶ್ರೀ ಜಾಲಪ್ಪನವರನ್ನು ತೃಪ್ತಿಪಡಿಸಲು ಸಾಧ್ಯವಾಗುತ್ತಿರಲಿಲ್ಲ. ಪ್ರತೀ ಸಭೆಯಲ್ಲೂ ಖರ್ಚುವೆಚ್ಚಗಳನ್ನು ಹೇಗೆ ಕಡಿಮೆ ಮಾಡಬೇಕು, ಇನ್ನೂ ಹೆಚ್ಚಿನ ಸೇವೆ ಹೇಗೆ ನೀಡಬಹುದು, ಹಾಸ್ಟೆಲ್ನಲ್ಲಿ ಯುವಕ ಯುವತಿಯರನ್ನು ಹೇಗೆ ನೋಡಿಕೊಳ್ಳಬೇಕು, ಒಳ್ಳೆಯ ಫಲಿತಾಂಶ ಬರುವುದಕ್ಕೆ ಏನೇನು ಮಾಡಬೇಕು ಇತ್ಯಾದಿ ಮಾರ್ಗದರ್ಶನ ಮಾಡುತ್ತಿದ್ದರು.

2015ರ ಜುಲೈ ತಿಂಗಳಿನಲ್ಲಿ ಅಕಾಡೆಮಿಗೆ ಸಲಹೆಗಾರರಾಗಿ ಸಹಾಯಮಾಡಲು ಒಪ್ಪಿದ ಒಬ್ಬ ನಿವೃತ್ತ ಐ.ಎ.ಎಸ್ ಅಧಿಕಾರಿ ಟ್ರಸ್ಟ್ ನ ಸಭೆಗೆ ಬಂದು ಕೆಲವು ಸಲಹೆಗಳನ್ನು ನೀಡಿದರು. ಅವರು ಹೇಳಿದ್ದನ್ನೆಲ್ಲಾ ಶಾಂತ ರೀತಿಯಿಂದ ಕೇಳಿಸಿಕೊಂಡ ಜಾಲಪ್ಪನವರು, ಅವರು ತೆರಳಿದ ನಂತರ `ಮೂಗಿಗಿಂತ ಮೂಗುತಿ ಭಾರ ಅನ್ನುವಂತಿದೆ ಇವರ ಸಲಹೆ. ಇವರು ಹೇಳಿದಂತೆ ಮಾಡಿದರೆ ಕೋಚಿಂಗ್ ವೆಚ್ಚಕ್ಕಿಂತ ಇತರೆ ವೆಚ್ಚಗಳೇ ಜಾಸ್ತಿಯಾಗುತ್ತವೆ. ಆದ್ದರಿಂದ ಇವರ ಅವಶ್ಯಕತೆ ಇಲ್ಲ, ನೀವುಗಳೇ ನಿರ್ವಹಿಸಿ' ಎಂದು ತಿಳಿಸಿದರು.

ಒಮ್ಮೆ ನಾವು ವಿವಿಧ ರೀತಿಯ ಪ್ರಚಾರ ಮಾಡಿದರೂ ನಮ್ಮ ಸಮುದಾಯದ ಯುವಕ ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ತರಬೇತಿಗೆ ಪ್ರವೇಶ ಪಡೆಯುತ್ತಿಲ್ಲ ಎಂದು ನಿರಾಶರಾಗಿ ಜಾಲಪ್ಪನವರ ಬಳಿ ಹೇಳಿದೆವು. ಶಾಂತಚಿತ್ತದಿಂದ ಕೇಳಿಸಿಕೊಂಡ ಅವರು `ನೀವು ಈಗ ತಾನೇ ಈ ತರಹದ ಸೇವೆಯಲ್ಲಿ

ತೊಡಗಿಸಿಕೊಂಡಿದ್ದೀರಿ, ನಾನು ಇದೇ ಕ್ಷೇತ್ರದಲ್ಲಿ ಕಳೆದ 50 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಮ್ಮ ಹಿಂದುಳಿದ ವರ್ಗಗಳಿಗೆ ಸೇರಿದ ಜನರೇ ಹಾಗೆ, ಒಮ್ಮೆಗೆ ಮುಂದೆ ಬರುವುದಿಲ್ಲ, ನಿಮ್ಮ ಕೆಲಸ ನೀವು ಶ್ರದ್ಧೆಯಿಂದ ಮಾಡಿ, ನಿಧಾನವಾಗಿ ಎಲ್ಲಾ ಸರಿ ಹೋಗುತ್ತದೆ' ಎಂದು ನಮಗೆಲ್ಲಾ ಉತ್ಸಾಹ ಬರುವಂತೆ ಮಾತನಾಡಿದರು.

ಸೋಲೂರಿನಲ್ಲಿ ತರಬೇತಿ ಪ್ರಾರಂಭದ ನಂತರ 8-10 ದಿನಗಳಿಗೆ ಒಮ್ಮೆ ನಾನು ಅವರಿಗೆ ಫೋನ್ ಮಾಡಿ ವಿವರ ನೀಡುತ್ತಿದ್ದೆ. ಒಂದು ವೇಳೆ ನಾನು ಫೋನ್ ಮಾಡದಿದ್ದರೆ ಅವರೇ ಸ್ವತಃ ಫೋನ್ ಮಾಡಿ `ಏನು ಹೇಗಿದ್ದೀರಿ? ನಿಮ್ಮಿಂದ ಫೋನ್ ಬರಲಿಲ್ಲ, ಸೋಲೂರಿನಲ್ಲಿ ಏನು ನಡೆಯುತ್ತಿದೆ. ಏನಾದರೂ ತೊಂದರೆ ಇದೆಯೇ?' ಎಂದು ಮುಂತಾಗಿ ವಿಚಾರಿಸುತ್ತಿದ್ದರು. ತೊಂಬತ್ತು ವರ್ಷಗಳ ಒಬ್ಬ ಹಿರಿಯ ವ್ಯಕ್ತಿ ಇಷ್ಟಪಟ್ಟು ಒಪ್ಪಿದ ಕೆಲಸಗಳನ್ನು ಹೇಗೆ ನಿಷ್ಠೆ ಮತ್ತು ಶ್ರದ್ಧೆಯಿಂದ ವಿಚಾರಿಸುತ್ತಿದ್ದಾರೆ ಎಂದು ಆಶ್ಚರ್ಯಪಡುತ್ತಿದ್ದೆ.

2017ರ ಜನವರಿಯಲ್ಲಿ ಒಂದು ದಿನ ಜಾಲಪ್ಪನವರು ನನಗೆ ಫೋನ್ ಮಾಡಿ `ಶಿವಾನಂದ್, ನಿಮ್ಮ ಬಯೋಡೇಟ ನನಗೆ ಕಳಿಸಿಕೊಡಿ' ಎಂದು ಹೇಳಿದರು, ನಾನು ಏತಕ್ಕೆ ಎಂದು ಕೇಳದೆ ಕಳುಹಿಸಿಕೊಟ್ಟೆ. ಎಂಟು ದಿನಗಳ ಬಳಿಕ ಕೋಲಾರದ `ಶ್ರೀ ದೇವರಾಜ ಅರಸು ಮೆಡಿಕಲ್ ಕಾಲೇಜ್' ನ ರಿಜಿಸ್ಟ್ರಾರ್ ನನಗೆ ಫೋನ್ ಮಾಡಿ `ನಮ್ಮ ಅಧ್ಯಕ್ಷರಾದ ಶ್ರೀ ಜಾಲಪ್ಪನವರ ಸೂಚನೆ ಮೇರೆಗೆ ನಿಮ್ಮನ್ನು ನಮ್ಮ ವೈದ್ಯಕೀಯ ಕಾಲೇಜಿನ ಬೋರ್ಡ್ ಆಫ್ ಮ್ಯಾನೇಜ್ ಮೆಂಟ್ನ ಡೈರೆಕ್ಟರ್ ಆಗಿ ನೇಮಿಸಿದ್ದೇವೆ. ನೀವು ನಿಮ್ಮ ಒಪ್ಪಿಗೆ ಪತ್ರವನ್ನು ಈ ಮೇಲ್ ಮೂಲಕ ಕಳುಹಿಸಿ' ಎಂದು ತಿಳಿಸಿದರು. ನನಗೆ ಆಶ್ಚರ್ಯ ಮತ್ತು ಸಂತೋಷ ಎರಡೂ ಏಕಕಾಲದಲ್ಲಿ ಆಯಿತು. ಆಗ ನಾನು ತಕ್ಷಣ ಜಾಲಪ್ಪನವರಿಗೆ ಫೋನ್ ಮಾಡಿ `ಸಾರ್, ನಾನು ಓದಿದ್ದು ಇಂಜಿನಿಯರಿಂಗ್, ನನಗೆ ನೀವು ನಿಮ್ಮ ಮೆಡಿಕಲ್ ಯೂನಿವರ್ಸಿಟಿಯಲ್ಲಿ ಬೋರ್ಡ್ ಆಫ್ ಮ್ಯಾನೇಜ್ ಮೆಂಟ್ನ ಡೈರೆಕ್ಟರ್ ಮಾಡಿದ್ದೀರಿ, ನಾನು ನಿಜಕ್ಕೂ ಅಲ್ಲಿ ಸೇವೆ ಮಾಡಲು ತಕ್ಕವನಾ?' ಎಂದು ಕೇಳಿದೆ. ಅದಕ್ಕೆ ಅವರು ಶಾಂತರೀತಿಯಿಂದ `ನೋಡಿ, ನೀವು ಕರ್ನಾಟಕ ಸರ್ಕಾರದಲ್ಲಿ ಕಳೆದ 35 ವರ್ಷಗಳಿಂದ ಹಿರಿಯ ಹುದ್ದೆಗಳಲ್ಲಿದ್ದು ಆಡಳಿತ ನಡೆಸಿದ್ದೀರಿ, ಬೋರ್ಡ್ ಆಫ್ ಮ್ಯಾನೇಜ್ ಮೆಂಟ್ ನಲ್ಲಿ ಮೆಡಿಕಲ್ ಗೆ ಸಂಬಂಧಿಸಿದ ವಿಷಯಗಳಲ್ಲದೆ ಆಡಳಿತಕ್ಕೆ ಸಂಬಂಧಿಸಿದ ಬಹಳಷ್ಟು ವಿಷಯಗಳಿರುತ್ತವೆ. ನೀವು ಅರ್ಹ ಮತ್ತು ಸೂಕ್ತ ವ್ಯಕ್ತಿ ಎಂದು ತೀರ್ಮಾನಿಸಿದ ನಂತರ ನಿಮ್ಮನ್ನು ಬೋರ್ಡ್ ಆಫ್ ಮ್ಯಾನೇಜ್ ಮೆಂಟ್ ಗೆ ಡೈರೆಕ್ಟರ್ ಆಗಿ ತೆಗೆದುಕೊಳ್ಳಲು ಸೂಚಿಸಿದ್ದೇನೆ, ಆದ್ದರಿಂದ ತಕ್ಷಣ ಒಪ್ಪಿಗೆ ಪತ್ರ ಕಳಿಸಿ" ಎಂದರು.

ದೇವರಾಜ ಅರಸು ಮೆಡಿಕಲ್ ಯೂನಿವರ್ಸಿಟಿಯ ಬೋರ್ಡ್ ಆಫ್ ಮ್ಯಾನೇಜ್ ಮೆಂಟ್ ನ ಡೈರೆಕ್ಟರ್ ಆದ ನಂತರ ನಡೆದ ಅದರ ಎಲ್ಲಾ ಸಭೆಗಳಲ್ಲೂ ಅಂದಿನಿಂದ ಇಂದಿನವರೆಗೆ ಭಾಗವಹಿಸಿ, ನನಗೆ ಸಾಧ್ಯವಾದ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. ಜಾಲಪ್ಪನವರ ನನ್ನ ಮೇಲಿನ ಈ ವಾತ್ಸಲ್ಯಕ್ಕೆ ನಾನು ಚಿರಋಣಿ!

ಜಾಲಪ್ಪನವರು ನನಗೆ ಹಿರಿಯರಾಗಿ, ಗುರುಗಳಾಗಿ ಮತ್ತು ಪ್ರೀತಿಪಾತ್ರರಾಗಿ ಹಲವು ವಿಷಯಗಳನ್ನು ಕಲಿಸಿದ್ದಾರೆ, ಇವರಿಂದಾಗಿ ನಾನು ನನ್ನ ಜೀವನ ಪಥದಲ್ಲಿ ಕೆಲವೊಂದು ವಿಷಯಗಳಲ್ಲಿ ಪಕ್ವತೆ ಪಡೆಯಲು ಸಾಧ್ಯವಾಗಿದೆ.

ಜಾಲಪ್ಪನವರು ಸಾಗರದಷ್ಟು ಆಳವಾದ ಮನಸ್ಸಿರುವ ದಾರ್ಶನಿಕ ನೇತಾರರು, ಅವರ ಅನುಭವ ಸಾಗರದಿಂದ ಒಂದು ಬೊಗಸೆ ನೀರನ್ನು ಎತ್ತಿಕೊಳ್ಳಲು ಸಾಧ್ಯವಾಗಿದ್ದು ನನ್ನ ಅದೃಷ್ಟ. ಈಗ ಅವರು ನಮ್ಮನ್ನು ಶಾಶ್ವತವಾಗಿ ಅಗಲಿದ್ದರೂ ನಮ್ಮ ನೆನಪುಗಳ ಅಂತರಾಳದಲ್ಲಿ ಸಜೀವವಾಗಿದ್ದಾರೆ. ಅವರ ಆತ್ಮಕ್ಕೆ ಸರ್ವಶಕ್ತ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ***